**<u>ಸಾಕ್ಷಿಯನ್ನು ದಿನಾಂಕ *02.08.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ನಮ್ಮ ಮನೆಯ ಪಕ್ಕದಲ್ಲಿ ಓಂಕಾರ್ ಮೋಟಾರ್ಸ್ ಇದ್ದು ಆ ಸಿ.ಸಿ ಟಿ.ವಿ ಫೂಟೇಜ್ ನಲ್ಲಿ ಬೆಳಗ್ಗಿನ ಜಾವದಲ್ಲಿ ಒಬ್ಬ ವ್ಯಕ್ತಿ ಬಂದು ನನ್ನ ತಾಯಿಯ ಕಡೆಯಿಂದ ಬಾಗಿಲು ತೆಗೆಸಿಕೊಂಡು ಬಾತ್ ರೂಂಗೆ ಹೋಗಿ ನನ್ನ ತಾಯಿಯ ಬಳೆಗಳನ್ನು ಬಿಚ್ಚಿಸಿಕೊಂಡು ಹೋಗಿದ್ದ. ಪೊಲೀಸರು ಆ ಸಿ.ಸಿ ಟಿವಿ ಫೂಟೇಜ್ ಅನ್ನು ನನಗೆ ತೋರಿಸಿದ್ದರು. ಈಗ ನಾನು ಸಿ.ಸಿ ಟಿವಿ ಫೂಟೇಜ್ ನಲ್ಲಿ ಇದ್ದ ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ತನಿಖಾಧಿಕಾರಿಯವರು ಹಾಜರುಪಡಿಸಿರುವ ನಿಪಿ–12 ರ ಯಥಾ ಸಿ.ಡಿ.ಯನ್ನು ಲ್ಯಾಪ್ ಟಾಪ್ ನಲ್ಲಿ ಹಾಕಿ ಸಾಕ್ಷಿದಾರರಿಗೆ ತೋರಿಸಲಾಯಿತು. ಸಾಕ್ಷಿದಾರರು ಸಿಡಿಯಲ್ಲಿ ಇದ್ದಂತಹ ದೃಶ್ಯಾವಳಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಿಡಿಯನ್ನು ನಿಪಿ–18 ಎಂದು ಗುರುತಿಸಲಾಯಿತು. ನಿಪಿ–18 ರ ದೃಶ್ಯಾವಳಿಯಲ್ಲಿ ಕಂಡು ಬಂದ ವ್ಯಕ್ತಿಯೇ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ವ್ಯಕ್ತಿ ಇರುತ್ತಾನೆ. ಏಕೆಂದರೆ ಆರೋಪಿತನನ್ನು ನಾನು ಆತನು 9 ವರ್ಷದ ಹುಡುಗ ಇದ್ದಾಗಿನಿಂದಲೂ ನೋಡಿರುತ್ತೇನೆ. ಆರೋಪಿತನು ತಳ್ಳುವ ಗಾಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದು ಪ್ರತಿದಿವಸ ನಮ್ಮ ಮನೆಯ ಪಕ್ಕದಲ್ಲಿ ಜಾಗ ಇತ್ತು ಅಲ್ಲಿ ನಿಲ್ಲಿಸುತ್ತಿದ್ದ. ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆ ಕೊಟ್ಟಿರುತ್ತೇವೆ. ಸಾಕ್ಷಿದಾರರಿಗೆ ಫೋಟೋಗಳನ್ನು ತೋರಿಸಲಾಯಿತು. ಸಾಕ್ಷಿದಾರರು ಬಂಗಾರದ ಬಳೆಗಳ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–6 ಮತ್ತು 7 ಎಂದು ಗುರುತಿಸಲ್ಪಟ್ಟಿರುತ್ತವೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ** ಎಸ್.ಕೆ.ಎಂ. ವಕೀಲರಿಂದಃ

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನ ತಂದೆ ಮೊದಲು ಹಣ್ಣಿನ ವ್ಯಾಪಾರ ಮಾಡುತ್ತಿದ್ದರು, ಅವರ ಕಡೆಯಿಂದ ನನ್ನ ತಂದೆ ಹಣ್ಣುಗಳನ್ನು ಖರೀದಿ ಮಾಡುತ್ತಿದ್ದರು ಅವರಿಗೆ ಕಾಲು ನೋವು ಆಗಿದ್ದರಿಂದ ವ್ಯಾಪಾರವನ್ನು ತನ್ನ ಮಗನಿಗೆ ಕೊಟ್ಟಿದ್ದರು ನಾವು ಇಲ್ಲದೇ ಇರುವಾಗ ಮನೆಯಲ್ಲಿ ಇರುವ ಗಿಡಗಳಿಗೆ ಆರೋಪಿತನು ನೀರನ್ನು ಸಹ ಹಾಕುತ್ತಿದ್ದ.

ಆರೋಪಿತನು ತಳ್ಳುವ ಹಣ್ಣಿನ ಗಾಡಿಯನ್ನು ಕಾಂಪೋಂಡ್ ಒಳಗಡೆ ಪಕ್ಕದಲ್ಲಿ ಪ್ರತಿದಿನ ನಿಲ್ಲಿಸುತ್ತಿದ್ದ. ನಾನು ಹೇಳುವ ಪ್ರಕಾರ ಆರೋಪಿತನು ಬೆಳಗ್ಗೆ 8.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ವ್ಯಾಪಾರ ಮಾಡುತ್ತಿರಲಿಲ್ಲ ಆತನು ಬೆಳಗ್ಗೆ 9.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಎಂದರೆ ಸರಿ. ದಿನಾಂಕ 19.08.2019 ರಲ್ಲಿ ಘಟನೆ ಆಗಿತ್ತು. ನಾನು ದಿನಾಂಕ 19.08.2019 ರಂದು ಬೆಳಗ್ಗಿನ ವೇಳೆಯಲ್ಲಿ ವಾಯುವಿಹಾರಕ್ಕೆ ನಮ್ಮ ಮನೆಯ ಮುಂದೆ ಇರುವ ಪಾರ್ಕ್ ಗೆ ಹೋಗಿದ್ದೆ. ನಾನು ಹೇಳುವ ಪ್ರಕಾರ ಘಟನೆ ದಿನಾಂಕ 19.08.2019 ರಂದು ನಡೆದಿರುವುದಿಲ್ಲ ದಿನಾಂಕ 21.08.2019 ರಂದು ನಡೆದಿರುತ್ತದೆ ಎಂದರೆ ಸರಿ. ನಾನು ದಿನಾಂಕ 21.08.2019 ರಂದು ಬೆಳಗ್ಗೆ 7.00 ಗಂಟೆಗೆ ವಾಯುವಿಹಾರಕ್ಕೆ ಹೋಗಿದ್ದೆ. ವಾಪಸ್ಸು ಬಂದಾಗ 7.45 ರಿಂದ 8.00 ಗಂಟೆ ಆಗಿತ್ತು. ನಾನು ವಾಪಸ್ಸು ಮನೆಗೆ ಬಂದಾಗ ಮನೆಯಲ್ಲಿ ನನ್ನ ಗಂಡ ಇದ್ದರು ಅವರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಿತ್ತು ಅವರು ವಿಶ್ರಾಂತಿ ಯಲ್ಲಿ ಇದ್ದರು ಮತ್ತು ನನ್ನ ತಾಯಿ ಇದ್ದರು. ನನ್ನ ಗಂಡ ಓಡಾಡುತ್ತಿದ್ದರು. ನನ್ನ ಗಂಡ ಮನೆಯ ಮುಂದೆ ಕಾಂಪೋಂಡ್ ಒಳಗಡೆ ವಾಕ್ ಮಾಡುತ್ತಿದ್ದರು. ಮನೆಯ ಮುಂದೆ ವಾಕ್ ಮಾಡುವಾಗ ನನ್ನ ಗಂಡ ಲುಂಗಿ ಧರಿಸುತ್ತಿದ್ದರು. ಘಟನೆಯಾಗಿತ್ತು ಎಂದು ಹೇಳುವ 3 ವಾರ ಅಥವಾ 2 ವಾರದ ಮುಂಚೆ ನನ್ನ ಗಂಡನಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಆಗಿತ್ತು.

2019 ನೇ ಇಸವಿ ಜುಲೈ ಅಥವಾ ಆಗಸ್ಟ್ ತಿಂಗಳಿನಲ್ಲಿ ನನ್ನ ತಾಯಿಗೆ ಸೊಂಟದ ಶಸ್ತ್ರಚಿಕಿತ್ಸೆ ಆಗಿತ್ತು. ನನ್ನ ತಾಯಿಗೆ ವಯಸ್ಸಾಗಿದ್ದರಿಂದ ನಮ್ಮ ಮನೆಯ ಕಾಂಪೋಂಡ್ ಒಳಗೆ ಬಿದಿದ್ದರಿಂದ ಸೊಂಟದ ಮೂಳೆ ಮುರಿದಿತ್ತು ಆದ್ದರಿಂದ ಸೊಂಟಕ್ಕೆ ಶಸ್ತ್ರ ಚಿಕಿತ್ಸೆ ಆಗಿತ್ತು. ನನ್ನ ತಾಯಿ ಬಾತ್ ರೂಂನಲ್ಲಿ ಕಾಲು ಜಾರಿ ಬಿದ್ದಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ಶಸ್ತ್ರ ಚಿಕಿತ್ಸೆ ಆದ ಮೇಲೆ ವಾಕರ್ ನ ಸಹಾಯದಿಂದ ಎಲ್ಲಾ ಕಡೆ ಓಡಾಡುತ್ತಿದ್ದರು. ವಾಕರ್ ಎಂದರೆ ಎರಡು ಕೈಗಳನ್ನು ಹಿಡಿದು ಸಪೋರ್ಟ್ ಮುಖಾಂತರ ಓಡಾಡುವ ವಾಕರ್ ಇತ್ತು. ನನ್ನ ತಾಯಿಗೆ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಆಗಿತ್ತು ಆ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿದ್ದೆ. ನನ್ನ ತಾಯಿಗೆ ಸೊಂಟಕ್ಕೆ ಶಸ್ತ್ರ ಚಿಕಿತ್ಸೆ ಆಗಿದ್ದನ್ನು ಹೊರತುಪಡಿಸಿದರೆ ಬೇರೆ ಯಾವುದೇ ಕಾಯಿಲೆ ಇರಲಿಲ್ಲ. ನನ್ನ ತಾಯಿ ಆ ದಿನ ಬಾತ್ ರೂಂ ಮತ್ತು ಟಾಯ್ಲೆಟ್ ಅಟ್ಯಾಚ್ ಇರುವ ಬಾತ್ ರೂಂ ನಲ್ಲಿ ಬ್ರಷ್ ಮಾಡುತ್ತಿದ್ದರು. ಆರೋಪಿತನು ಗೇಟ್ ಬಾಗಿಲು ತೆಗೆದು ಒಳಗೆ ಬಂದಾಗ ನನ್ನ ಗಂಡ ಕಾಂಪೋಂಡ್ ಒಳಗೆ ವಾಕ್ ಮಾಡುತ್ತಿದ್ದರು ಎಂದರೆ ಇರಬಹುದು ಆಗ ನಾನು ಇರಲಿಲ್ಲ.

ನಾನು ಮನೆಗೆ ಬರುವ ಪೂರ್ವದಲ್ಲಿಯೇ ತಮ್ಮ ದೂರನ್ನು ಕೊಟ್ಟಿದ್ದರು. ನನ್ನ ತಮ್ಮ ನಮ್ಮ ಮನೆಯ ಹಿಂದಿನ ಮನೆಯಲ್ಲಿ ವಾಸಾಇರುತ್ತಾನೆ. ಆತನಿಗೆ ನನ್ನ ತಾಯಿ ಹೋಗಿ ವಿಷಯವನ್ನು ತಿಳಿಸಿದ್ದರಂತೆ. ನಮ್ಮ ಮತ್ತು ನನ್ನ ತಮ್ಮನ ಮನೆಯ ನಡುವೆ ಗೋಡೆ ಇದ್ದು ಓಡಾಡಲು ಅವಕಾಶ ಇರುತ್ತದೆ. ನಮ್ಮ ಮನೆಯ ಮುಂದುಗಡೆ ಮತ್ತು ಹಿಂದುಗಡೆ ಓಡಾಡಲು ಬಾಗಿಲುಗಳು ಇರುತ್ತವೆ. ನಾನು ದೂರನ್ನು ಕೊಟ್ಟಿರಲಿಲ್ಲ ನನನ ತಮ್ಮ ಕೊಟ್ಟಿದ್ದ. ದೂರನ್ನು ಕೊಟ್ಟ ತಕ್ಷಣ ಪೊಲೀಸರು ನಮ್ಮ ಮನೆಗೆ ಬಂದಿದ್ದರು. ಪೊಲೀಸರು ಆ ದಿನ ಬೆಳಗ್ಗೆ 12.00 ಗಂಟೆಯ ಒಳಗೆ ಬಂದಿದ್ದರು. ಪೊಲೀಸರು ಬಂದ ಮೇಲೆ ಸ್ಥಳ ಮಹಜರ್ ಮಾಡಿದ್ದರು ನಾನು ಆ ವೇಳೆಯಲ್ಲಿ ಸಹಿ ಮಾಡಿದ್ದೆ. ನಾನು ಸ್ಥಳ ಪಂಚನಾಮೆಗೆ ಸಹಿ ಮಾಡಿರುತ್ತೇನೋ ಅಥವಾ ಇಲ್ಲವೋ ಎಂದು ಈಗ ಮರೆತು

ಹೋಗಿರುತ್ತೇನೆ. ಮಹಜರ್ ವೇಳೆಯಲ್ಲಿ ನಾನು ಮತ್ತು ನನ್ನ ತಾಯಿ ಇಬ್ಬರೇ ಇದ್ದೆವು ಬೇರೆ ಯಾರು ಇರಲಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಿಲ್ಲುಗಳ ಪ್ರಕಾರ ನನ್ನ ಮಗಳು ಪ್ರಿಯಾಂಕ ಚಿನ್ನದ 7 ಬಳೆಗಳನ್ನು ಖರೀದಿ ಮಾಡಿರುತ್ತಾರೆ ಎಂದು ಉಲ್ಲೇಖ ಇರುತ್ತದೆ ಎಂದರೆ ಸರಿ. ನನ್ನ ಮಗಳು ಪ್ರಿಯಾಂಕ ನನ್ನ ತಾಯಿಗೆ ಚಿನ್ನದ ಬಳೆಗಳನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ಓಂಕಾರ್ ಮೋಟಾರ್ಸ್ ನ ಸಿ.ಸಿ ಟಿವಿಯಲ್ಲಿ ನೋಡಿದ್ದೆ ಮತ್ತು ಅವರು ನಮ್ಮ ಮನೆಗೂ ತಂದು ತೋರಿಸಿದ್ದರು. ಪೊಲೀಸರು ಬಂದ ಮೇಲೆ ಹತ್ತಿರದಲ್ಲಿ ಸಿ.ಸಿಟಿವಿ ಎಲ್ಲಿ ಇರುತ್ತದೆ ಎಂದು ಕೇಳಿದ್ದರು ಅದಕ್ಕೆ ನಾನು ಓಂಕಾರ್ ಮೋಟಾರ್ಸ್ ನಲ್ಲಿ ಸಿ.ಸಿ ಟಿವಿ ಇದೆ ಎಂದು ಹೇಳಿದ್ದೆ. ಪೊಲೀಸರು ನನಗೆ ಮಧ್ಯಾಹ್ನ 12.00 ಗಂಟೆಯ ನಂತರ ಸಿಸಿ ಟಿವಿ ದೃಶ್ಯಾವಳಿಗಳನ್ನು ತೋರಿಸಿದ್ದರು. ಓಂಕಾರ್ ಮೋಟಾರ್ಸ್ ನಲ್ಲಿ ಕೆಲಸ ಮಾಡುವ ಹುಡುಗರು ಸಿಸಿ ಟಿವಿ ದೃಶ್ಯಾವಳಿಗಳನ್ನು ನನಗೆ ತೋರಿಸಿದ್ದರು. ಆ ದೃಶ್ಯಾವಳಿಗಳಲ್ಲಿ ಗೇಟ್ ತೆಗೆದು ಒಳಗೆ ಬಂದಿದ್ದು ಪ್ಯಾಸೆಜ್ ಗೆ ಹೋಗಿದ್ದು ಮತ್ತು ಪುನಃ ಗ್ಯಾರೇಜ್ ಗೆ ಹೋಗಿದ್ದು ಮತ್ತು ಮನೆಯ ಒಳಗಡೆ ನುಗ್ಗಿದ್ದು ಕಂಡು ಬಂದಿತ್ತು. ನಾನು ದಿನಾಂಕ 21.08.2019 ರಂದು ಬೆಳಗ್ಗಿನ ದೃಶ್ಯಾವಳಿಗಳನ್ನು ಆ ಸಿಸಿ ಟಿವಿ ಫೂಟೇಜ್ ನಲ್ಲಿ ನೋಡಿದ್ದೆ. ಆ ದಿನ ಒಳಗಡೆ ಬಂದಂತಹ ವ್ಯಕ್ತಿ ಹೆಲ್ಮೆಟ್ ಧರಿಸಿದ್ದಂರಿಂದ ಯಾರು ಗುರುತಿಸಿಲ್ಲ ಎಂದರೆ ಸರಿ ಆದರೆ ಆತನ ವಾಯ್ಸ್ ನಿಂದ ನನ್ನ ತಾಯಿ ಪತ್ತೆ ಹಿಡಿದರು. ಸಿಸಿ ಟಿವಿಯಲ್ಲಿ ವಾಯ್ಸ್ ಕೇಳಿಸಿರಲಿಲ್ಲ ಆದರೆ ಆ ವ್ಯಕ್ತಿ ಒಳಗಡೆ ಬಂದು ಮಾತನಾಡಿದ್ದರಿಂದ ಆತನ ವಾಯ್ಸ್ ಅನ್ನು ನನ್ನ ತಾಯಿ ಗುರುತಿಸಿದ್ದರು.

ದೂರನ್ನು ಕೊಟ್ಟಾಗ ಚಿನ್ನದ ಬಳೆಗಳನ್ನು ಯಾರು ಕಿತ್ತುಕೊಂಡು ಹೋಗಿರುತ್ತಾರೆ ಎಂದು ನಮಗೆ ಗೊತ್ತಿರುವುದಿಲ್ಲ. ಪೊಲೀಸರು ಸಾಯಂಕಾಲದ ವೇಳೆಗೆ ಕಳ್ಳ ಮತ್ತು ಬಂಗಾರದ ಬಳೆಗಳು ಸಿಕ್ಕಿರುವುದಾಗಿ ಹೇಳಿದರು ಆದರೆ ನನಗೆ ತೋರಿಸಿರಲಿಲ್ಲ. ನನ್ನ ತಾಯಿ ಘಟನೆಯಾದ 2 ದಿವಸಕ್ಕೆ

ಮರಣ ಹೊಂದಿದರು. ಘಟನೆಯಾದ ಮೇಲೆ ನನ್ನ ತಾಯಿ ಚೆನ್ನಾಗಿಯೇ ಇದ್ದರು ಆ ಕಾರಣಕ್ಕಾಗಿ ನಾನು ಆಸ್ಪತ್ರೆಗೆ ತೋರಿಸಿರಲಿಲ್ಲ ಎಂದರೆ ಸರಿ. ಘಟನೆಯಾಗುವ ಪೂರ್ವದಿಂದಲೂ ನನ್ನ ತಾಯಿ ಚೆನ್ನಾಗಿ ಇದ್ದರು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಕೃತ್ಯ ನಡೆದ 2 ದಿನಗಳ ನಂತರ ನನ್ನ ತಾಯಿಗೆ ಎದೆ ನೋವು ಕಾಣಿಸಿಕೊಂಡಿತ್ತು ಕೃತ್ಯದ ಘಟನೆಯ ಹಿನ್ನಲೆಯಲ್ಲಿ ಅವರು ಹೃದಯಾಘಾತಕ್ಕೆ ಒಳಗಾಗಿದ್ದರು ನಂತರ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಅಲ್ಲಿ ಅವರು ಮೃತಪಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ನಿಪಿ–10 ರಂತೆ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಔಷಧಿ ಅಂಗಡಿಗೆ ನನ್ನ ತಾಯಿಗೆ calcium ಮಾತ್ರೆ ತರಲು ಹೋಗಿದ್ದೆ. ಆ ದಿನ ನಾನು ಮಾತ್ರೆ ತರಲು ಒಬ್ಬಳೇ ಹೋಗಿದ್ದೆ. ನಾನು ಆ ದಿನ ನಡೆದುಕೊಂಡು ಹೋಗಿದ್ದೆ. ಲಕ್ಷ್ಮೀದೇವಿ ಮೆಡಿಕಲ್ಸ್ ಗೆ ಹೋಗಿದ್ದೆ. ಆರೋಪಿತನು ನನ್ನ ತಾಯಿಯ ಬಾಯಿಗೆ ಬಟ್ಟೆ ತುರುಕಿದ್ದ ಆದ್ದರಿಂದ ಬಾಯಿ ಸ್ವಲ್ಪ ಅಲ್ಸರ್ ಆಗಿತ್ತು ಮತ್ತು ನನ್ನ ತಾಯಿಗೆ ಗಾಬರಿಯಾಗಿತ್ತು ಮತ್ತು ತುಂಬಾ ಶಾಕ್ ಆಗಿತ್ತು. ಶಾಕ್ ಆಗಿದ್ದರಿಂದ ಹೃದಯಾಘಾತ ಆಗಿರಬಹುದು. ಘಟನೆಯಾದ ಮೇಲೆ 2 ದಿನಗಳ ಕಾಲ ನನ್ನ ತಾಯಿ ಊಟ ತಿಂಡಿ ಮಾಡಿಕೊಂಡು ಚೆನ್ನಾಗಿ ಇದ್ದರು. ನನ್ನ ತಾಯಿಯ ಬಾಯಿಗೆ ಬಟ್ಟೆ ತುರುಕಿದ್ದರಿಂದ ಅಲ್ಸರ್ ಆಗಿದ್ದರ ಬಗ್ಗೆ ಚಿಕಿತ್ಸೆ ಕೊಡಿಸಿರಲಿಲ್ಲ. ನಮ್ಮ ಮನೆಯ ಮುಂದೆ ಇರುವ ಗೇಟ್ ನಿಂದ ನಮ್ಮ ಮನೆಯವರೆಗೆ 10–15 ಅಡಿ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಅದೇ ಖಾಲಿ ಜಾಗದಲ್ಲಿ ನನ್ನ ಗಂಡ ವಾಕ್ ಮಾಡುತ್ತಾರೆ ಎಂದರೆ ಸರಿ. ನಮ್ಮ ಮನೆಯ ಯಾವುದೇ ಭಾಗವನ್ನು ಬಾಡಿಗೆಗೆ ಕೊಟ್ಟಿರುವುದಿಲ್ಲ. ನಮ್ಮ ಮನೆಯಲ್ಲಿ ಇರುವ ಒಂದು ಗ್ಯಾರೇಜ್ ಅನ್ನು ಬಾಡಿಗೆಗೆ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. ಆರೋಪಿತನು ಹಣ್ಣಿನ ತಳ್ಳುವ ಗಾಡಿಯನ್ನು ಗ್ಯಾರೇಜ್ ನಲ್ಲಿ ಇಡುತ್ತಿದ್ದರಿಂದ ದಿನಕ್ಕೆ 80/– ರೂ ಬಾಡಿಗೆ ಯನ್ನು ನನ್ನ ತಾಯಿಗೆ ಕೊಡುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಮನೆಯ ಮೇಲ್ಭಾಗದಲ್ಲಿ ಡೆವಲಪರ್ಸ್ ಕಛೇರಿ

ಇರುತ್ತದೆ ಅದನ್ನು ಬಾಡಿಗೆಗೆ ಕೊಟ್ಟಿದ್ದೇವೆ. ಅದು ಸಿಂಧೂರ್ ಡೆವಲಪರ್ಸ್ ಇತ್ತು. 1 ನೇ ಮಹಡಿಗೆ ಹೋಗಲು ಕಾಂಪೋಂಡ್ ಒಳಗಡೆ ಮೆಟ್ಟಿಲುಗಳು ಇರುತ್ತವೆ. ಮನೆಯ ಗೇಟನ್ನು ತೆಗೆದ ತಕ್ಷಣ ಮೆಟ್ಟಿಲುಗಳ ಮುಖಾಂತರ ಮೊದಲ ಮಹಡಿಗೆ ಹೋಗಬೇಕಾಗುತ್ತದೆ ಎಂದರೆ ಸರಿ. ಸಿಂಧೂರ ಡೆವಲಪರ್ಸ್ ಕಛೇರಿ ಬೆಳಗ್ಗೆ 10.00 ಗಂಟೆಗೆ ತೆಗೆಯುತ್ತಿದ್ದರು ಒಬ್ಬ ಹೆಣ್ಣು ಮಗಳು ಮತ್ತು ರಾಘವೇಂದ್ರ ಎಂಬುವವರು ತೆಗೆಯುತ್ತಿದ್ದರು. ಯಾವಾಗಲಾದರೊಮ್ಮೆ ಗ್ರಾಹಕರು ಬರುತ್ತಿದ್ದರು. ನಾನು ಪಾರ್ಕ್ ನ ಒಳಗಡೆ ವಾಕ್ ಮಾಡುತ್ತಿದ್ದೆ. ಬಂಗಾರದ ಬಳೆಗಳು ಎಲ್ಲಿ ಸಿಕ್ಕವು ಎಂದು ಪೊಲೀಸರು ನನಗೆ ತಿಳಿಸಿದ್ದರು. ಆರೋಪಿತರು ಎಲ್ಲಿ ಗಾಡಿ ನಿಲ್ಲಿಸುತ್ತಿದ್ದನೋ ಆ ಸ್ಥಳದಲ್ಲಿ ಇರುವ ಮಣ್ಣಿನಲ್ಲಿ ಹೂತಿದ್ದ. ಅದು ಫುಟ್ ಬಾತ್ ಟೈಲ್ಸ್ ಇತ್ತು. ಅದು ಸಾರ್ವಜನಿಕರು ಓಡಾಡುವ ಸ್ಥಳ ಎಂದರೆ ಸರಿ. ಆ ಸಾರ್ವಜನಿಕ ಸ್ಥಳದ ಟೈಲ್ಸ್ ಕೆಳಗೆ ಬಳೆಗಳನ್ನು ಯಾರು ಬೇಕಾದರೂ ಇಟ್ಟಿರಬಹುದು ಎಂದರೆ ಸರಿಯಲ್ಲ. ಏಕೆಂದರೆ ಆರೋಪಿತನೇ ಒಪ್ಪಿಕೊಂಡಿದ್ದ. ನನ್ನ ತಾಯಿ ಮನೆಯಲ್ಲಿ ಒಬ್ಬರೇ ಇರುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಾಯಿಯ ಜೊತೆಗೆ ಬಂದ ಮೇಲೆ ಗ್ಯಾರೇಜ್ ಅನ್ನು ಬೇರೆಯವರಿಗೆ ಬಾಡಿಗೆ ಕೊಡಬೇಕು ಮತ್ತು ಆ ಜಾಗವನ್ನು ಆರೋಪಿತನಿಂದ ಖಾಲಿ ಮಾಡಿಸಬೇಕು ಎನ್ನುವ ಉದ್ದೇಶದಿಂದ ನಾನು ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಮ್ಮ ವಾಸ ಮಾಡಿಕೊಂಡಿರುವ ಮನೆಯ ಬಗ್ಗೆ ಮತ್ತು ನಾವು ವಾಸಮಾಡಿಕೊಂಡಿರುವ ಮನೆಯ ಬಗ್ಗೆ ನಮ್ಮಿಬ್ಬರ ನಡುವೆ ವಿವಾದ ಇರುತ್ತದೆ ಎಂದರೆ ಸರಿಯಲ್ಲ.ನಾನು ಈಗ ನೋಡುತ್ತಿರುವ ನಿಪಿ-18 ರ ದೃಶ್ಯಾವಳಿಗಳಲ್ಲಿ ನನ್ನ ಗಂಡ ವಾಕ್ ಮಾಡುತ್ತಿರುವುದು ಕಾಣಿಸಿರುತ್ತದೆ. ಮತ್ತು ಅದೇ ದೃಶ್ಯಾವಳಿಯಲ್ಲಿ ಒಬ್ಬ ವ್ಯಕ್ತಿ ಹೆಲ್ಮೆಟ್ ಧರಿಸಿ ಗೇಟ್ ಒಳಗೆ ಬಂದು ಮೆಟ್ಟಿಲನ್ನು ಹತ್ತಿ ಹೋಗುತ್ತಿರುವುದು ಕಾಣಿಸಿರುತ್ತದೆ ಎಂದರೆ ಸರಿಯಲ್ಲ. ಆ ವ್ಯಕ್ತಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನೇ ಎಂದು ಹೇಳಲು ಆಗುವುದಿಲ್ಲ ಎಂದರೆ

ಸರಿಯಲ್ಲ. ಆತನ body structure ನೋಡಿ ಆರೋಪಿ ಅಂತ ಹೇಳಲು ಆಗುತ್ತದೆ. ನಾನು ಈಗ ನೋಡುತ್ತಿರುವ ನಿಪಿ–18 ರ ದೃಶ್ಯಾವಳಿ ದಿನಾಂಕ 21.08.2019 ರ ಹಿಂದಿನ ದಿನದ ದೃಶ್ಯಾವಳಿ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ದೃಶ್ಯಾವಳಿಗಳಲ್ಲಿ ದಿನಾಂಕ 20.08.2019 ಸಮಯ 18.41 ಎಂದು ಕಾಣಿಸುತ್ತಿದ್ದೆ. ನಿಪಿ–18 ರ ಪ್ರಕಾರ ಆ ದೃಶ್ಯಾವಳಿಗಳು ದಿನಾಂಕ 20.08.2019 ಸಂಜೆ 6.41 ಗಂಟೆಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ನಡೆಯದೇ ಇದ್ದರು ಸಹ ಆರೋಪಿತನನ್ನು ನಮ್ಮ ಗ್ಯಾರೇಜ್ ನಿಂದ ಬಿಡಿಸುವ ಸಲುವಾಗಿ ಆರೋಪಿತನ ವಿರುದ್ಧ ಸುಳ್ಳು ಆರೋಪಣೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***